## ಅಡುಗೆಯುವನನ್ನು ಕಳಿಸಿ



ಅಡುಗೆ ಮಾಡುವುದು ನನ್ನ ಹವ್ಯಾಸ. ನೌಕರಿಯಲ್ಲಿದ್ದಾಗಲೂ ಅಡುಗೆ ಮಾಡಿ ಊಟ ಮಾಡಿಕೊಂಡೇ ಆಫೀಸಿಗೆ ಹೋಗುತ್ತಿದ್ದೆ. ಬೆಂಗಳೂರಿನ ಅಪಾರ್ಟ್‌ಮೆಂಟಿನಲ್ಲಿ ವಾಸವಿರುವ ನನ್ನ ಮಗಳ ಮನೆಗೆ ಬಂದಾಗಲೂ ಅಡುಗೆ ಕೆಲಸ ನನ್ನದೇ. ಹೀಗೊಂದು ದಿನ ಪಂಚೆ ಮಾತ್ರ ಧರಿಸಿ ಅಡಿಗೆ ಮಾಡುತ್ತಿದ್ದೆ. ಅದು ಪಕ್ಕದ ಮನೆಗೂ ಕಾಣುತ್ತಿತ್ತು. ಮಾರನೇ ದಿನ ನೆರೆಮನೆಯವರ ಮನೆಗೆ ಬರುತ್ತಿದ್ದ ಅಡುಗೆಯವರು ಬರಲಿಲ್ಲವಂತೆ. ಆಕೆ ಮಗಳ ಎದುರು, 'ನಮ್ಮ ಮನೆಯ ಅಡುಗೆ ಕೆಲಸದವರು ಬಂದಿಲ್ಲ, ನಿಮ್ಮ ಮನೆಯಲ್ಲಿ ಅಡುಗೆ ಮಾಡುವವರನ್ನು ಒಂದು ದಿನ ನಮ್ಮ ಮನೆಗೆ ಕಳಿಸಿ. ಕೈತುಂಬ ಹಣ ಕೊಡುತ್ತೇವೆ' ಎಂದರು. ಮಗಳು, 'ಅವರು ಅಡುಗೆಯವರಲ್ಲ, ನಮ್ಮ ತಂದೆ' ಎಂದಾಗ ಅವರ ಮುಖ ನೋಡಬೇಕಿತ್ತು.

**ಎ.ಎನ್. ವೆಂಕಟೇಶ್**

## ಮ್ಯಾಚಿಂಗ್



ಯಾರ ಬಗ್ಗೆ ಇನ್ಯಾರೊ ಏನು ಹೇಳಿದರೂ ನಂಬುತ್ತ, ತಾನೂ ಹಾಗೆಯೇ ಚಿತ್ರವಿಚಿತ್ರ ಸುದ್ದಿ ಹರಡುವ ನಮ್ಮ ಮಾಲಿನಿಯನ್ನು ಗೆಳತಿಯರೆಲ್ಲಾ 'ಹಿತ್ತಾಳೆ ಕಿವಿ ಮಾಲಿನಿ' ಎಂದೇ ಕರೆಯುತ್ತಿದ್ದರು. ಆ ದಿನ ಗೆಳತಿಯೊಬ್ಬಳು, 'ಹಿತ್ತಾಳೆ ಕಿವಿ ಮಾಲಿನಿ ಇದ್ದಾಳಲ್ಲ... ಅವಳು...' ಎಂದು ಏನೊ ಹೇಳುತ್ತಿದ್ದಳು. ಪಕ್ಕದಲ್ಲಿದ್ದ ಏಳು ವರ್ಷದ ನಮ್ಮ ಮಗಳು, 'ಆ!... ಹಿತ್ತಾಳೆ ಕಿವಿಯಾ?... ಹಾಗಿದ್ರೆ ಮಾಲಿನಿ ಆಂಟಿ ಚಿನ್ನದ ಓಲೆ ಹೇಗೆ ಹಾಕ್ತಾರೆ? ಹಿತ್ತಾಳೆ ಕಿವಿಗೆ, ಚಿನ್ನದ ಓಲೆ ಮ್ಯಾಚಿಂಗ್ ಆಗುತ್ತಾ?' ಎಂದಾಗ ಗೆಳತಿಯರೆಲ್ಲಾ ಕಕ್ಕಾಬಿಕ್ಕಿ.

ಚಿತ್ರಗಳು: ಗಣೇಶ ಆಚಾರ್ಯ

**ಸುಶೀಲಾ ಆರ್. ರಾವ್**